

ಗೊತ್ತಾಗುತ್ತದೆ. ಆದರೆ, ಮಕ್ಕಳಿಗೆ ಮಾತ್ರ ಗೇಮ್ ಅಂದ್ರೆ ಊಟ, ನಿದ್ರೆ ಏನೂ ಬೇಡ.

ಕಲಿಕೆಯಲ್ಲಿ ಜಾಣನಾಗಿದ್ದ ಹುಡುಗ ದಿನ ಕಳೆದಂತೆ ಹಿಂದುಳಿಯುತ್ತಾನೆ. ಹೋಂ ವರ್ಕ್ ರಾಶಿಯಾಗುತ್ತಲೇ ಇರುತ್ತದೆ. ಅಭ್ಯಾಸದಲ್ಲಿ ನಿರಾಸಕ್ತಿ ಹೆಚ್ಚಾಗುತ್ತಲೇ ಇರುತ್ತದೆ. ಕೆಲವೊಮ್ಮೆ ಅಭ್ಯಾಸಕ್ಕೆ ಕುಳಿತರೂ ನಡುವೆ ಗೇಮ್ ಆಡುವ ಮನಸ್ಸು. ಇದರಿಂದಾಗಿ ಮಕ್ಕಳು ತಮಗೆ ಗೊತ್ತಿಲ್ಲದಂತೆ ಅಪಮೌಲ್ಯಗಳಿಗೆ ಮೆಲ್ಲಗೆ ಜಾರಿಕೊಳ್ಳುತ್ತಾರೆ. ಥ್ರಿಲ್ ಕೊಡುವ ಹೊಡಿ, ಬಡಿ, ಕೊಲ್ಲು ಎನ್ನುವ ಪದಪುಂಜಗಳು ಮಕ್ಕಳ ಎಳೆಯ ಮನಸ್ಸಲ್ಲಿ ಸಂವೇದನೆಯನ್ನೇ ಕೊಂದುಬಿಡುತ್ತವೆ. ಗೇಮ್‌ಗೆ ಸಂಬಂಧಿಸಿದ ಖರ್ಚಿಗಾಗಿ ಅಪ್ಪ–ಅಮ್ಮನ ಬಳಿ ಸುಳ್ಳು ಹೇಳುವುದು, ಕದಿಯುವುದು ರೂಢಿ ಮಾಡಿಕೊಳ್ಳುತ್ತಾರೆ.

ಇದು ಇತ್ತೀಚೆಗೆ ದೆಹಲಿಯಲ್ಲಿ ನಡೆದ ಘಟನೆ. ವೃದ್ಧರೊಬ್ಬರ ಅಕೌಂಟ್‌ನಿಂದ 2.34 ಲಕ್ಷ ರೂಪಾಯಿ ಎರಡು ತಿಂಗಳ ಅಂತರದಲ್ಲಿ ಬೇರೆಯವರಿಗೆ ವರ್ಗವಾಗಿತ್ತು. ಇದು ಆ ವೃದ್ಧರಿಗೆ ಗೊತ್ತಾಯಿತು. ಪೊಲೀಸರಿಗೆ ದೂರು ಕೊಟ್ಟರು. ತನಿಖೆ ಶುರುವಾಯಿತು. ಆಮೇಲೆ ತಿಳಿಯಿತು, ಆ ವೃದ್ಧರ ಹದಿನೈದು ವರ್ಷದ ಮೊಮ್ಮಗನೇ ಹಣವನ್ನು ಗುಟ್ಟಾಗಿ ವರ್ಗ ಮಾಡಿದ್ದ. ಅದು ಪಬ್‌ಜಿ ಗೇಮ್‌ನ ಏಸ್ ಲೆವೆಲ್‌ಗಾಗಿ!

ಕೆಲವು ಮಕ್ಕಳು ಮೊಬೈಲ್ ಕೊಡದಿದ್ದರೆ ಮನೆಬಿಟ್ಟು ಹೋಗುವ ಇಲ್ಲವೇ ಆತ್ಮಹತ್ಯೆ ಮಾಡಿಕೊಳ್ಳುವ ಬೆದರಿಕೆ ಹಾಕುತ್ತವೆ. ಕೆಲವು ದಿನಗಳ ಹಿಂದೆ ಹಾವೇರಿಯ ಹದಿನೈದು ವರ್ಷದ ಬಾಲಕ ಕ್ರಿಮಿನಾಶಕ ಸೇವಿಸಿ ಆತ್ಮಹತ್ಯೆ ಮಾಡಿಕೊಂಡ. ಇದಕ್ಕೆ ಕಾರಣ ಪಬ್‌ಜಿ ಗೇಮ್. ಪಬ್‌ಜಿ ಆಡುವುದನ್ನು ಚಟವಾಗಿಸಿಕೊಂಡಿದ್ದ. ಎಷ್ಟು ಹೇಳಿದರೂ ಕೇಳಿಸಿಕೊಳ್ಳುವ ಸ್ಥಿತಿಯಲ್ಲಿ ಆತ ಇರಲಿಲ್ಲ. ಇದರಿಂದ ರೋಸಿ ಹೋದ ಪೋಷಕರು ಮೊಬೈಲ್‌ಗೆ ಇಂಟರ್‌ನೆಟ್ ಡೇಟಾ ಹಾಕಿಸಲಿಲ್ಲ. ಇದರಿಂದ ಕುಪಿತಗೊಂಡು ಪ್ರಾಣವನ್ನೇ ಕಳೆದುಕೊಂಡ.

ಇಂತಹ ವರದಿಗಳನ್ನು ಮಾಧ್ಯಮಗಳಿಂದ ತಿಳಿದುಕೊಂಡಿರುವ ಪೋಷಕರು ಭಯಗೊಂಡು 'ಹತ್ತು ನಿಮಿಷ ಅಷ್ಟೇ ಕೊಡೋದು' ಎಂದರೆ, 'ಓಕೆ' ಎನ್ನುತ್ತಾರೆ. ಮೊಬೈಲ್ ಕೈಗೆ ಸಿಕ್ಕ ಮೇಲೆ ಲೆವೆಲ್ ಮೇಲೆ ಲೆವೆಲ್ ಮಾಡುತ್ತಾ, ಗಂಟೆಗಳು ಕಳೆದರೂ ಗೇಮ್ ಬಿಡುವುದಿಲ್ಲ.

'ಮಕ್ಕಳು ಮೊಬೈಲ್ ಗೇಮ್ ಆಡುವುದು ತಪ್ಪೇ ಅಥವಾ ಸರಿಯೇ' – ಈ ಪ್ರಶ್ನೆಗೆ ಉತ್ತರ ಮಿತಿಯಲ್ಲಿದ್ದರೆ ಎಲ್ಲವೂ ಸರಿಯೇ. ಮಿತಿಮೀರಿದಾಗ ಮಾತ್ರ ಎಲ್ಲವೂ ತಪ್ಪೇ. ಅಳತೆಮೀರಿ ತಿಂದರೆ ಅಜೀರ್ಣ, ವಾಂತಿ ಆಗಲೇಬೇಕು. ಅದೇ ರೀತಿ ಈ ಮೊಬೈಲ್ ಗೇಮ್. ಚಾರುಕೀರ್ತಿ, ರಂಜನ್, ಪ್ರಣವ್ ಹಾಗೂ ಭುವನ್ ರೀತಿ ಹೊತ್ತುಗೊತ್ತಿಲ್ಲದಂತೆ, ಹೊರಗಿನ ಜಗತ್ತಿನಿಂದ ದೂರು ಉಳಿದರೆ ಆಪತ್ತು ಗ್ಯಾರಂಟಿ.

ಆದ್ದರಿಂದ ಪೋಷಕರು ಮಕ್ಕಳ ಕೈಗೆ ಮೊಬೈಲ್ ಎಷ್ಟು ಹೊತ್ತು ಕೊಡಬೇಕು ಎನ್ನುವುದನ್ನು ನಿರ್ಧರಿಸಬೇಕು. ಅವರ ಕೈಗೆ ಮೊಬೈಲ್ ಕೊಟ್ಟ ಮೇಲೆ ಕಣ್ಗಾವಲು ಇಡಬೇಕು. ಇಲ್ಲದೇ ಹೋದರೆ ಮಕ್ಕಳ ಭವಿಷ್ಯವನ್ನು ಪೋಷಕರೇ ಹಾಳು ಮಾಡಿದಂತೆ ಆಗುತ್ತದೆ.